ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 125-132
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ (ವಿಶೇಷವಾಗಿ ಸಕಲೇಶಪುರ ತಾಲೂಕಿನ ಕಾಡುಮನೆ ಟೀ ಎಸ್ಟೇಟ್‌ಗೆ ಸಂಬಂಧಿಸಿದಂತೆ)

**ಡಾ.ಸುರೇಶ ಸಿ**
ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು – ಸ್ವಾಯತ್ತ, ಹಾಸನ

***Abstract:***
*ಟೀ ಬೆಳೆ ಟೀ ಸೊಪ್ಪು ಟೀ ಕುಡಿಯುವುದು ಇದರದ್ದು ಸಾವಿರಾರು ವರ್ಷಗಳ ಇತಿಹಾಸವಿದೆ. ಇದು ಮೊದಲು ಚೀನಾದಲ್ಲಿ ಹುಟ್ಟಿ, ಅಲ್ಲಿಂದ ಯುರೋಪ್ ಮತ್ತು ನಂತರ ಬ್ರಿಟಿಷರ ಮೂಲಕ ಭಾರತಕ್ಕೆ ಆಗಮನವಾಗಿದೆ, ನಂತರ ವಾಣಿಜ್ಯ ಬೆಳೆಯಾಗಿ ಉತ್ಪಾದನೆಯಲ್ಲಿ ಗುರುತಿಸಿಕೊಂಡಿದೆ. ಭಾರತದಲ್ಲಿ ಟೀ ಉತ್ಪಾದನೆಯು ಅಸ್ಸಾಂ ರಾಜ್ಯದ ಮೂಲಕ ಭಾರತ ಪ್ರಮುಖ ಟೀ ಉತ್ಪಾದಕ ರಾಷ್ಟ್ರವಾಗಿ ಬೆಳೆಯುವಂತೆ ಮಾಡಿತು. ಟೀ ಸಸ್ಯ ಕ್ಯಮೆಲಿಯಾ ಸಿನೆನ್ಸಿಸ್, ಚೀನಾ ಮತ್ತು ಉತ್ತರ ಮ್ಯಾನ್ಮಾರ್‌ನ ಗಡಿ ಪ್ರದೇಶದಲ್ಲಿ ಪ್ರಾರಂಭವಾಯಿತು ಎನ್ನುವುದು ತಿಳಿದುಬಂದಿದೆ. ಚೀನಾದ ರಾಜವಂಶದ ಕಾಲದಲ್ಲಿ ಚಹಾವನ್ನು ಔಷಧೀಯ ವಿಶ್ರಣದಲ್ಲಿ ಬಳಸಲಾಗುತ್ತಿತ್ತು ಮತ್ತು ಕ್ರಿ.ಶ.ಮೂರನೇ ಶತಮಾನದಲ್ಲಿ ವೈದ್ಯಕೀಯ ಪತ್ಯಗಳಲ್ಲಿ ಟೀ ಕುಡಿಯುವ ಬಗ್ಗೆ ನಂಬಲರ್ಹ ದಾಖಲೆಗಳಿವೆ. ಹದಿನಾರನೇ ಶತಮಾನದ ಆರಂಭದಲ್ಲಿ ಪೋರ್ಚುಗೀಸ್ ಪುರೋಹಿತರು ಮತ್ತು ವ್ಯಾಪಾರಿಗಳ ಮೂಲಕ ಟೀ ಪಾಶ್ಚಿಮಾತ್ಯ ಜಗತ್ತಿಗೆ ಪರಿಚಯವಾಹಿತು. 1840–1860ರ ದಶಕದಲ್ಲಿ ಅಸ್ಸಾಂನಲ್ಲಿ ಟೀ ಉದ್ಯಮವನ್ನು ರೂಪಿಸಲಾಯಿತು. ಇದರಲ್ಲಿ ಮಣಿರಾಮ್ ದತ್ತ ಬರುವಾ ಅವರವಂತಹ ಭಾರತೀಯರು ತಮ್ಮದೆ ಆದ ಟೀ ತೋಟಗಳನ್ನು ಸ್ಥಾಪಿಸಿದರು. ನಂತರದ ದಿನಗಳಲ್ಲಿ ಟೀ ಉದ್ಯಮವು ತಾಂತ್ರಿಕವಾಗಿ ಸುಸಜ್ಜಿತವಾಯಿತು ಮತ್ತು ಪ್ರಮುಖ ಟೀ ಬ್ರಾಂಡ್‌ಗಳನ್ನು ಬೆಳೆಸಿತು. ಭಾರತವು ಜಗತ್ತಿನ ಅತಿದೊಡ್ಡ ಟೀ ಉತ್ಪಾದನೆಯಲ್ಲಿ ಒಂದಾಗಿದೆ ಮತ್ತು ಅಸ್ಸಾಂ ಮತ್ತು ಡಾರ್ಜಿಲಿಂಗ್‌ನಂತಹ ಅನೇಕ ಸ್ಥಳಗಳಲ್ಲಿ ಟೀ ಉತ್ಪಾದನೆಯಾಗುತ್ತಿದೆ ಅಂತವುಗಳಲ್ಲಿ ಹಾಸನ ಜಿಲ್ಲೆ ಸಕಲೇಶಪುರ ತಾಲೂಕಿನ ಕಾಡುಮನೆ ಟೀ ಎಸ್ಟೇಟ್ ಸಹ ಒಂದಾಗಿದೆ.*

***Keywords:*** *ಟೀ ಎಸ್ಟೇಟ್, ಕೂಲಿ ಕಾರ್ಮಿಕರು, ವಲಸೆ ಕಾರ್ಮಿಕರು, ಕಾಡುಮನೆ, ಸಕಲೇಶಪುರ*

## ಪೀಠಿಕೆ

ಟೀ ಒಂದು ಜನಪ್ರಿಯ ಬಿಸಿನೀರಿನ ಪಾನೀಯವಾಗಿದ್ದು, ಇದನ್ನು ಚಹಾ ಗಿಡದ ಒಣಗಿದ ಎಲೆಗಳನ್ನು ಬಿಸಿನೀರಿನಲ್ಲಿ ಕುದಿಸಿ ತಯಾರಿಸಲಾಗುತ್ತದೆ. ಇದು ಉತ್ಕರ್ಷಣ ನಿರೋಧಕಗಳು ಮತ್ತು ಕೆಫೀನನ ಅಂಶವನ್ನು ಹೊಂದಿರುತ್ತದೆ. ಆರೋಗ್ಯ ಪ್ರಯೋಜನಗಳನ್ನು

***Please cite this article as:*** ಸುರೇಶ, ಸಿ. (2025). ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ (ವಿಶೇಷವಾಗಿ ಸಕಲೇಶಪುರ ತಾಲೂಕಿನ ಕಾಡುಮನೆ ಟೀ ಎಸ್ಟೇಟ್‌ಗೆ ಸಂಬಂಧಿಸಿದಂತೆ). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 125–132

ಒದಗಿಸುತ್ತದೆ ಮತ್ತು ವಿಶ್ವದಾದ್ಯಂತ ವಿವಿಧ ರೀತಿಯಲ್ಲಿ ಕುಡಿಯಲ್ಪಡುತ್ತದೆ. ಇದು ಕಪ್ಪು, ಹಸಿರು, ಬಿಳಿ ಮತ್ತು ಊಲಾಂಗ್ ಚಹಾ ಸೇರಿದಂತೆ ವಿವಿಧ ಬಗೆಗಳಲ್ಲಿ ಬರುತ್ತದೆ ಆದರೆ ಇವುಗಳ ಸಂಸ್ಕರಣೆಯ ವಿಧಾನವು ವಿಭಿನ್ನವಾಗಿರುತ್ತದೆ. ಟೀ ಪಾನೀಯವಾಗಿ ಮೊದಲು ಗುರುತಿಸಿ ಕೊಂಡವರ ಬಗ್ಗೆ ಚೀನಾದಲ್ಲಿ ಒಂದು ಕಥೆಯು ಅಸ್ತಿತ್ವದಲ್ಲಿದೆ. 5000 ವರ್ಷಗಳ ಹಿಂದೆ ಚೀನಾದಲ್ಲಿ ಒಬ್ಬ ಸಮರ್ಥ ಆಡಳಿತಗಾರ ಹಾಗೂ ಅನ್ವೇಷಕ ಪ್ರವೃತ್ತಿಯುಳ್ಳಂತಹ ಚಕ್ರವರ್ತಿಯು ಆಳ್ವಿಕೆಯನ್ನು ನಡೆಸುತ್ತಿದ್ದನು. ಆತನು ಯಾವಾಗಲು ಕುದಿಸಿದ ನೀರನ್ನೇ ಕುಡಿಯುತ್ತಿದ್ದನು ಒಮ್ಮೆ ಒಂದು ಗಿಡದ ಬಳಿ ನೀರನ್ನು ಕುದಿಸುತ್ತಿದ್ದಂತಹ ಸಂಧರ್ಭದಲ್ಲಿ ಆ ಗಿಡದ ಕೆಲವು ಎಲೆಗಳು ನೀರಿಗೆ ಬಿದ್ದು ಅವುಗಳು ಕುದಿದು ತಮ್ಮ ರಸವನ್ನು ನೀರಿಗೆ ನೀಡಿದವು. ಇದರಿಂದಾಗಿ ಆ ನೀರು ಹೊಸ ಬಗೆಯ ರುಚಿಯನ್ನು ಹಾಗೂ ಸುಗಂಧವನ್ನು ಪಡೆದುಕೊಂಡಿತು. ಈ ಹೊಸ ಬಗೆಯ ರುಚಿಯ ಚಕ್ರವರ್ತಿಗೆ ಬಹಳವಾಗಿ ಹಿಡಿಸಿತು ನಂತರದಲ್ಲಿ ಇದೇ ಟೀ ಬಳಕೆಗೆ ಬಂದಿತು.

ಭಾರತದಲ್ಲಿ ಮೊಟ್ಟ ಮೊದಲಿಗೆ ಟೀ ತೋಟಗಾರಿಕೆ ಬೇಸಾಯವು 1840 ರಿಂದ ಪ್ರಾರಂಭಗೊಂಡಿತು, ಅಂದಿನ ಗೌವರ್ನರ್ ಆಗಿದ್ದ ವಿಲಿಯಂ ಬೆಂಟಿಕ್‌ನ ಪ್ರೋತ್ಸಾಹದಿಂದಾಗಿ ಬ್ರಹ್ಮಪುತ್ರ ಕಣಿವೆ ಡಾರ್ಜಿಲಿಂಗ್ ಮತ್ತು ನೀಲಗಿರಿ ಪ್ರದೇಶಗಳಲ್ಲಿ ಟೀ ಬೇಸಾಯ ಪ್ರಾರಂಭವಾಯಿತು. ಭಾರತದ ಪ್ರಮುಖ ಟೀ ಬೆಳೆಯುವ ರಾಜ್ಯಗಳೆಂದರೆ ಅಸ್ಸಾಂ, ಪಶ್ಚಿಮಬಂಗಾಳ, ಕೇರಳ, ತಮಿಳುನಾಡು, ಕರ್ನಾಟಕ ಮತ್ತು ಉತ್ತರ ಪ್ರದೇಶ ಇವುಗಳಲ್ಲಿ ಅಸ್ಸಾಂ ರಾಜ್ಯವು ಪ್ರಮುಖವಾದದು ಇದು ಭಾರತದ ಟೀ ಉತ್ಪನ್ನದ ಶೇ 55 ರಷ್ಟನ್ನು ಒದಗಿಸುವುದು. ಟೀ ಉತ್ತೇಜಕಾರದ ಪಾನೀಯ ಬೆಳೆಯಾಗಿದೆ ಟೀ ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಲ್ಲಿಯೇ ಅತಿಮುಖ್ಯವಾದ ಪಾನೀಯವಾಗಿದೆ ಇದು ಥೀಯಿನ್ ಎಂಬ ಉತ್ತೇಜಕಾರಕವನ್ನು ಒಳಗೊಂಡಿದೆ. ಅಲ್ಲದೆ ಇದು ಅತಿ ಸುಲಭ ದರದ ಪಾನೀಯವೂ ಸಹ ಆಗಿದೆ. ಭಾರತಲ್ಲಿ ಇದರ ವಾಣಿಜ್ಯ ಮಾದರಿಯಲ್ಲಿ ಉತ್ಪಾದನೆಯನ್ನು ಬ್ರಿಟಿಷರ ಆಳ್ವಿಕೆಯಲ್ಲಿದ್ದ 1840 ಲಾರ್ಡ್ ವಿಲಿಯಂ ಬೆಂಟಿಕ್‌ರವರ ಅವಧಿಯಲ್ಲಿ ಆರಂಭಿಸಲಾಯಿತು. ಪ್ರಾರಂಭದಲ್ಲಿ ಉತ್ತಮ ತಳಿಯ ಟೀ ಬೀಜಗಳಿಂದ ಅಸ್ಸಾಂ ಪ್ರದೇಶಲ್ಲಿ ಸಸಿ ಮಡಿಗಳನ್ನು ಬೆಳೆಸಿ, ಉತ್ತರದಲ್ಲಿ ಡಾರ್ಜಿಲಿಂಗ್ ಹಾಗೂ ದಕ್ಷಿಣದಲ್ಲಿ ನೀಲಗಿರಿ ಪ್ರದೇಶದಲ್ಲಿ ಟೀ ತೋಟಗಳನ್ನು ಬೆಳೆಸಲಾಯಿತು. ನಂತರ ಇದರ ಬೇಸಾಯವು ಇತರ ಪ್ರದೇಶಗಳಿಗೆ ವಿಸ್ತರಿಸಿತು.

ಭಾರತವು ಪ್ರಪಂಚದಲ್ಲಿ ಟೀ ಕ್ಷೇತ್ರದಲ್ಲಿ ಚೈನಾದ ನಂತರ ಎರಡನೆಯ ಸ್ಥಾನವನ್ನು ಹೊಂದಿದ್ದು, ಇದು ಉತ್ಪಾದನೆಯಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ಇದು ಪ್ರಪಂಚದ ಟೀ ದ ಶೇ.21 ರಷ್ಟು ಕ್ಷೇತ್ರವನ್ನು ಹೊಂದಿದ್ದು, ಶೇ.33ರಷ್ಟು ಟೀ ವನ್ನು ಉತ್ಪಾದಿಸುವುದು. ಭಾರತದ ತೋಟಗಾರಿಕೆಯ ಉತ್ಪನ್ನಗಳಲ್ಲಿ ಟೀ ಅತಿಮುಖ್ಯ ಸಾಂಪ್ರದಾಯಿಕ ವ್ಯವಸಾಯೋತ್ಪನ್ನ ವಸ್ತುಗಳಲ್ಲಿ ಒಂದಾಗಿದೆ. ಭಾರತದಲ್ಲಿ ಟೀ ಬೆಳೆಯುವ ಕ್ಷೇತ್ರವು ನಿರಂತರವಾಗಿ ವಿಸ್ತಾರಗೊಂಡಿದೆ.

ಭಾರತದಲ್ಲಿ ಟೀ ಕ್ಷೇತ್ರವು 1951–96 ಅವಧಿಯಲ್ಲಿ 1.14 ಲಕ್ಷ ಹೆಕ್ಟೇರ್‌ಗಳಷ್ಟು ಅಧಿಕಗೊಂಡಿದೆ. ವಿಸ್ತಾರವಾದ ಆಂತರಿಕ ಮಾರುಕಟ್ಟೆ ಹಾಗೂ ವಿದೇಶೀ ಮಾರುಕಟ್ಟೆಯ ಬೇಡಿಕೆಯ ಪೂರೈಕೆಗಾಗಿ ಟೀ ಬೆಳೆಯುವ ಕ್ಷೇತ್ರವು ಇಂದಿಗೂ ಸಹ ವಿಸ್ತಾರ ಗೊಳ್ಳುತ್ತಿರುವುದು. ಇದೇ ಅವಧಿಯಲ್ಲಿ ಉತ್ಪಾದನೆಯು 2.75 ಲಕ್ಷ ಟನ್‌ಗಳಿಗೆ ಅಧಿಕಗೊಂಡಿದೆ. ಭಾರತವು ಪ್ರಪಂಚದಲ್ಲಿ ಅತಿಹೆಚ್ಚು ಟೀ ಇಳುವರಿಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಒಂದಾಗಿದ್ದು, ಉತ್ಪಾದನೆಯ ಹೆಚ್ಚಳಕ್ಕೆ ಅಧಿಕ ಇಳುವರಿಯು ಅತಿಮುಖ್ಯ ಕಾರಣವಾಗಿದೆ. ಟೀ ನ ಹೊಸ ತಳಿಗಳ ಶೋಧನೆ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಟೀ ಸಂಶೋಧನಾ ಕೇಂದ್ರವನ್ನು ಅಸ್ಸಾಮಿನ ಜೋರಮ್ ನದಿ ದಡದಲ್ಲಿ

ತೋಕಲೈ ಬಳಿಯಲ್ಲಿ ಸ್ಥಾಪಿಸಲಾಗಿದೆ. ಇದರ ಉತ್ಪಾದನೆ ಹಾಗೂ ರಫ್ತನ್ನು ನಿರ್ವಹಿಸಲು ಟೀ ಮಂಡಳಿಯನ್ನು ಸ್ಥಾಪಿಸಲಾಗಿದೆ.

ಭಾರತದಲ್ಲಿ ಟೀ ಯನ್ನು ಉತ್ಪಾದಿಸುವ ಎರಡು ವಲಯಗಳಿವೆ. ಅವುಗಳೆಂದರೆ, ಈಶಾನ್ಯ ವಲಯ ಹಾಗೂ ದಕ್ಷಿಣ ವಲಯ. ಈಶಾನ್ಯ ವಲಯವು ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳನ್ನು ಒಳಗೊಂಡಿದೆ. ಈ ವಲಯವು ಭಾರತದ ಒಟ್ಟು ಟೀ ಬೇಸಾಯಕ್ಕೊಳಪಟ್ಟಿರುವ ಶೇ.78 ರಷ್ಟು ಕ್ಷೇತ್ರವನ್ನು ಹೊಂದಿದೆ. ಅಸ್ಸಾಂ ಮತ್ತು ಪಶ್ಚಿಮಬಂಗಾಳ ಭಾರತದಲ್ಲಿ ಟೀ ಉತ್ಪಾದನೆಯಲ್ಲಿ ಕ್ರಮವಾಗಿ ಮೊದಲ ಹಾಗೂ ಎರಡನೇಯ ಸ್ಥಾನವನ್ನು ಪಡೆದಿವೆ. ಈ ವಲಯವು ಭಾರತದ ಉತ್ಕೃಷ್ಟ ದರ್ಜೆಯ ಟೀ ಯನ್ನು ಉತ್ಪಾದಿಸುವುದು. ಈ ವಲಯದ ಟೀಯು ಕಲ್ಕತ್ತಾದ ಮೂಲಕ ರಫ್ತಾಗುವುದರಿಂದಲೇ ಕಲ್ಕತ್ತಾವನ್ನು "ಟೀ ಬಂದುರು" ಎಂದು ಕರೆಯಲಾಗಿದೆ.

ದಕ್ಷಿಣ ವಲಯವು ತಮಿಳುನಾಡು, ಕೇರಳ ಮತ್ತು ಕರ್ನಾಟಕ ರಾಜ್ಯಗಳನ್ನು ಒಳಗೊಂಡಿದೆ. ಈ ವಲಯವು ದೇಶದ ಒಟ್ಟು ಟೀ ಬೆಳೆಯ ಕ್ಷೇತ್ರದ ಶೇ.22 ರಷ್ಟನ್ನು ಒಳಗೊಂಡಿರುವುದು. ತಮಿಳುನಾಡಿನ ನೀಲಗಿರಿ ಮತ್ತು ಅಣ್ಣಾ ಮಲೈ ಬೆಟ್ಟಗಳು, ಕೇರಳ ಮತ್ತು ಕರ್ನಾಟಕದ ಮಲೆನಾಡಿನ ಜಿಲ್ಲೆಗಳಲ್ಲಿ ಟೀ ಉತ್ಪಾದಿಸಲ್ಪಡುವುದು. ದಕ್ಷಿಣದ ವಲಯವು ಭಾರತದ ಒಟ್ಟು 39.24 ರಷ್ಟನ್ನು ಟೀ ಉತ್ಪಾದಿಸುವುದು. ಈಶಾನ್ಯದ ರಾಜ್ಯಗಳಿಗಿಂತ ದಕ್ಷಿಣ ವಲಯದಲ್ಲಿ ಇಳುವರಿಯು ಹೆಚ್ಚು, ಆದರೆ ಈಶಾನ್ಯ ವಲಯದ ಟೀ ಯು ಉತ್ತಮ ದರ್ಜೆಯದು. ಭಾರತವು ವಿಸ್ತಾರವಾದ ಟೀ ಮಾರುಕಟ್ಟೆಯನ್ನು ಹೊಂದಿದೆ. ಇದರಿಂದ ಒಟ್ಟು ಉತ್ಪಾದನೆಯ ಶೇ.21.1 ರಷ್ಟನ್ನು ಮಾತ್ರ ಇಂದು ರಫ್ತು ಮಾಡಲಾಗುತ್ತಿದೆ. ಟೀ ರಫ್ತಿನಲ್ಲಿ ಏಷ್ಯಾಖಂಡದಲ್ಲಿ ಭಾರತವು ಚೈನಾದ ನಂತರ ಎರಡನೇ ಸ್ಥಾನವನ್ನು ಹೊಂದಿದೆ. ಇದು ಏಷ್ಯಾದ ಒಟ್ಟು ರಫ್ತಿನ ಶೇ.24.4ರಷ್ಟು ಟೀಯನ್ನು ರಫ್ತು ಮಾಡುತ್ತಿದೆ.

**ಅಧ್ಯಯನ ವಿಷಯದ ಹೇಳಿಕೆ**

ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ (ವಿಶೇಷವಾಗಿ ಸಕಲೇಶಪುರ ತಾಲೂಕಿನ ಕಾಡುಮನೆ ಟೀ ಎಸ್ಟೇಟ್‌ಗೆ ಸಂಬಂಧಿಸಿದಂತೆ) ಟೀ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿ ಕಾರ್ಮಿಕರ ಸ್ಥಿತಿಗಳನ್ನು ತಿಳಿಯುವ ಪ್ರಯತ್ನವಾಗಿದೆ.

**ಅಧ್ಯಯನದ ಉದ್ದೇಶಗಳು**

- ಟೀ ಎಸ್ಟೇಟ್ ಕಾರ್ಮಿಕರ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ತಿಳಿಯುವುದು.
- ಟೀ ಎಸ್ಟೇಟ್ ಕಾರ್ಮಿಕರ ಸಾಕ್ಷರತೆಯ ಮಟ್ಟವನ್ನು ಅಧ್ಯಯನ ಮಾಡುವುದು.
- ಟೀ ಎಸ್ಟೇಟ್ ಕಾರ್ಮಿಕರ ಸಮಸ್ಯೆಗಳನ್ನು ಅರ್ಥೈಸುವುದು.

**ಪ್ರಾಕ್–ಕಲ್ಪನೆಗಳು**

- ಟೀ ಎಸ್ಟೇಟಿನ ಕಾರ್ಮಿಕರು ಕಡಿಮೆ ವೇತನವನ್ನು ಪಡೆದುಕೊಂಡು ಜೀವನ ನಿರ್ವಹಣೆ ಹೆಚ್ಚು ವ್ಯಯ ಮಾಡುವುದರಿಂದ ಹೆಚ್ಚಾಗಿ ಆರ್ಥಿಕವಾಗಿ ಹಿಂದುಳಿದಿದ್ದಾರೆ.
- ಟೀ ಎಸ್ಟೇಟಿನ ಕಾರ್ಮಿಕರಲ್ಲಿ ಹೆಚ್ಚಾಗಿ ಹಿಂದಿಳಿದ ಮತ್ತು ಪರಿಶಿಷ್ಟಜಾತಿ ಮತ್ತು ಪಂಗಡದವರೇ ಹೆಚ್ಚಾಗಿರುವುದರಿಂದ ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿಲ್ಲ,
- ಟೀ ಎಸ್ಟೇಟಿನಕಾರ್ಮಿಕರು ಬಡತನ ಮತ್ತು ಕಡಿಮೆ ಆದಾಯ ಇರುವುದರಿಂದ ಶೈಕ್ಷಣಿಕ ವೆಚ್ಚವನ್ನು ಭರಿಸಲಾಗದೇ ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ.

**ಅಧ್ಯಯನ ಕಾರ್ಯ ಕ್ಷೇತ್ರದ ವ್ಯಾಪ್ತಿ**

ಭಾರತವು ಏಷ್ಯಾ ಖಂಡದಲ್ಲಿಯೇ ಪ್ರಮುಖ ದೇಶವಾಗಿದ್ದು, ವಿವಿಧ ಭಾಷೆ, ಸಂಸ್ಕೃತಿ, ವೃತ್ತಿ, ಜಾತಿ, ಧರ್ಮ, ಪ್ರದೇಶಗಳನ್ನು ಒಳಗೊಂಡಿರುವಂತಹ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಹಾಗೆಯೇ ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಸಕಲೇಶಪುರ ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ತಾಲೂಕುಗಳಲ್ಲಿ ಒಂದಾಗಿದ್ದು 5 ಹೋಬಳಿಗಳನ್ನು ಒಳಗೊಂಡಿದೆ. ಸಕಲೇಶಪುರವು ಅಪ್ಪಟ ಮಲೆನಾಡು ಪ್ರಾಂತ್ಯವಾಗಿದ್ದು, ಪ್ರಕೃತಿ ಸೌಂದರ್ಯವನ್ನು ತನ್ನ ಮಡಿಲಿನಲ್ಲಿ ತುಂಬಿಕೊಂಡಿದೆ. ಕಾಫಿ, ಟೀ, ಏಲಕ್ಕಿ, ಕರಿಮೆಣಸು, ಭತ್ತ ಮುಂತಾದ ಬೆಳೆಗಳು ಇಲ್ಲಿನ ಪ್ರಮುಖ ಬೆಳೆಗಳಾಗಿವೆ. ಕಾಡುಮನೆ ಹಾಸನ ಜಿಲ್ಲೆಯಲ್ಲಿ ಟೀ ಬೆಳೆಯವಂತಹ ಏಕೈಕ ಸ್ಥಳವಾಗಿದೆ. ಇದು ಸಕಲೇಶಪುರ ಕೇಂದ್ರ ಸ್ಥಾನದಿಂದ ಸುಮಾರು 35 ಕಿ.ಮೀ. ಅಂತರದಲ್ಲಿದೆ. ಇಲ್ಲಿ ಸುಮಾರು 6000 ಎಕರೆ ಪ್ರದೇಶದಲ್ಲಿ ಟೀ ಸೊಪ್ಪನ್ನು ಬೆಳೆಯಲಾಗುತ್ತಿದೆ. ಕಾಡುಮನೆ ಟೀ ತೋಟವು ಜೇನುಕಲ್ಲುಗುಡ್ಡ, ಅರಮನೆಗುಡ್ಡ, ಮೂರು ಕಣ್ಣುಗುಡ್ಡ, ಗುಬ್ಬರ ಬೆಟ್ಟ ಮತ್ತು ಶಿಶಿಲ ಕಾಡುಗಳಿಂದ ಸುತ್ತುವರಿದಿದೆ.

**ಮಾದರಿ ವಿಧಾನ**

ಹಾಸನ ಜಿಲ್ಲೆ ಸಕಲೇಶಪುರ ತಾಲೂಕಿನ ಕಾಡುಮನೆ ಟೀ ಎಸ್ಟೇಟ್‌ಲ್ಲಿ ದುಡಿಯುತ್ತಿರುವ ಕಾರ್ಮಿಕರುಗಳಲ್ಲಿ 50 ಜನ ಕಾರ್ಮಿಕರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಂಡು ಸಂದರ್ಶನ ಅನುಸೂಚಿಯ ಸಹಾಯದಿಂದ ಮಾಹಿತಿ ಸಂಗ್ರಹಿಸಲಾಗಿದೆ ಹಾಗೂ ಅವಲೋಕನ ವಿಧಾನವನ್ನು ಇಲ್ಲಿ ಮಾಹಿತಿ ಸಂಗ್ರಹಣೆಗಾಗಿ ಬಳಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ.

**ಅಧ್ಯಯನದ ವಿಶ್ಲೇಷಣೆ ಮತ್ತು ಚರ್ಚೆಗಳು**

**ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಲಿಂಗ**

ಲಿಂಗ ಇದೊಂದು ಜೈವಿಕ ವ್ಯವಸ್ಥೆ. ಹುಟ್ಟಿನಿಂದ ನಿರ್ಧರಿಸಲಾಗುವಂತದ್ದು, ಹೆಣ್ಣು ಮತ್ತು ಗಂಡು ಎನ್ನುವುದು ಇದು ಕ್ರೋಮೋಜೋಮುಗಳು ಹಾಗೆ ದೇಹ ರಚನೆ ಮತ್ತು ಸಂತಾನೋತ್ಪತ್ತಿ ಕ್ರಿಯೆಗಳ ಮೇಲೆ ಅವಲಂಬಿತವಾಗಿರುತ್ತದೆ. ಸಾಮಾಜಿಕವಾಗಿ ಲಿಂಗ ಅಸಮಾನತೆ ಹಾಗೂ ಸಾಮಾಜಿಕ ತಾರತಮ್ಯದಂತಹ ಸಾಮಾಜಿಕ ರಚನೆಗಳನ್ನು ಒಳಗೊಂಡಿದೆ. ಲಿಂಗ ಅಸಮಾನತೆಗಳು ಮಹಿಳೆಯರ ಅಭಿವೃದ್ಧಿಗೆ ಅಡ್ಡಿಯಾಗುತ್ತವೆ ಎಂದು ಹೇಳಲಾಗುತ್ತದೆ.

**ಕೋಷ್ಟಕ 01: ಟೀ ಎಸ್ಟೇಟ್ ಕಾರ್ಮಿಕರ ಲಿಂಗದ ವಿವರ**

| ಕ್ರ.ಸಂ | ಲಿಂಗ | ಆವೃತ್ತಿ | ಶೇಕಡವಾರು |
|---|---|---|---|
| 01 | ಪುರುಷರು | 27 | 54% |
| 02 | ಮಹಿಳೆಯರು | 23 | 46% |
| | **ಒಟ್ಟು** | **50** | **100%** |

ಮೇಲಿನ ಕೋಷ್ಟಕದಲ್ಲಿ ಕಂಡುಬರುವುದೆನೆಂದರೆ ಟೀ ಎಸ್ಟೇಟ್ ಕಾರ್ಮಿಕರ ಲಿಂಗದ ವಿವರವನ್ನು ಗಮನಿಸಿದಾಗ ಪುರುಷರು (27) ಶೇ.54% ರಷ್ಟು, ಮಹಿಳೆಯರು (23) ಶೇ.46% ರಷ್ಟು ಕಾರ್ಮಿಕರಿದ್ದಾರೆ. ಟೀ ಎಸ್ಟೇಟ್‌ನಲ್ಲಿ ಪುರುಷರೇ ಹೆಚ್ಚು ಕೆಲಸಮಾಡುತ್ತಿರುವುದು ಕಂಡುಬಂದಿದೆ. ಏಕೆಂದರೆ ಕುಟುಂಬ ನಿರ್ವಹಣೆಯನ್ನು ಮಾಡಲು ಪುರುಷರ ಪಾತ್ರ ಹೆಚ್ಚಾಗಿರುವುದರಿಂದ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ ಎಂಬುದು ಈ ಅಧ್ಯಯನದಿಂದ ಕಂಡುಬಂದಿದೆ.

**ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ವಯಸ್ಸು**

ಮಾನವನ ಹುಟ್ಟಿನಿಂದ ಸಾವಿನ ತನಕ ಏರಿಕೆಯಲ್ಲಿ ಹೋಗುತ್ತದೆ. ನಿರಂತರವಾಗಿ ವಯಸ್ಸು

ಬದಲಾಗುತ್ತಾ ಇರುತ್ತದೆ. ಮಾನವರು ಕೂಡಾ ಇದ್ದಹಾಗೆ ಇರುವುದಿಲ್ಲ ಅವರು ಕಾಲಕ್ಕೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಬದಲಾಗುತ್ತಾ ಹೋಗುತ್ತಾರೆ. ನಾವು ಸಮಾಜದಲ್ಲಿ ಯಾವಾಗಲೂ ಒಂದೇ ವಯಸ್ಸಿನಲ್ಲಿ ಇರಲು ಸಾಧ್ಯವಿಲ್ಲ.

**ಕೋಷ್ಟಕ 02: ಟೀ ಎಸ್ಟೇಟ್ ಕಾರ್ಮಿಕರ ವಯಸ್ಸಿನ ವಿವರ**

| ಕ್ರ.ಸಂ | ವಯಸ್ಸು | ಆವೃತ್ತಿ | ಶೇಕಡವಾರು |
|---|---|---|---|
| 01 | 20–30 | 10 | 20% |
| 02 | 31–40 | 19 | 38% |
| 03 | 41–50 | 08 | 16% |
| 04 | 51–60 | 13 | 26% |
| | ಒಟ್ಟು | 50 | 100% |

ಮೇಲಿನ ಕೋಷ್ಟಕದಲ್ಲಿ ಕಂಡುಬರುವುದೆನೆಂದರೆ ಟೀ ಎಸ್ಟೇಟ್ ಕಾರ್ಮಿಕರ ವಯಸ್ಸನ್ನು ನೋಡಿದಾಗ 20–30 ವಯಸ್ಸಿನವರು (10) ಶೇ.20% ರಷ್ಟು, 31–40 ವಯಸ್ಸಿನವರು (19) ಶೇ.38% ರಷ್ಟು, 41–50 ವಯಸ್ಸಿನವರು (08) ಶೇ.16% ರಷ್ಟು ಹಾಗೂ 51–60 ವಯಸ್ಸಿನವರು (13) ಶೇ. 26% ರಷ್ಟು ಕಂಡು ಬಂದಿದ್ದಾರೆ. 30–40 ರ ವಯಸ್ಸಿನ ಟೀ ಎಸ್ಟೇಟ್ ಕಾರ್ಮಿಕರು ಹೆಚ್ಚಾಗಿ ಕಂಡು ಬಂದಿದ್ದಾರೆ. ಮನೆಯ ನಿರ್ವಹಣೆ ಹಾಗೂ ಮಕ್ಕಳ ವಿದ್ಯಾಭ್ಯಾಸದ ಜವಬ್ದಾರಿ ಇರುವುದರಿಂದ 30–40 ರವರೆಗಿನ ವಯಸ್ಸಿನ ಕಾರ್ಮಿಕರು ಹೆಚ್ಚಾಗಿ ಕಂಡು ಬಂದಿದ್ದಾರೆ.

**ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಧರ್ಮ**

ಸಮಾಜದಲ್ಲಿ ಧರ್ಮ ಎಂಬುದು ಸಂಕುಚಿತ ಅರ್ಥದಲ್ಲಿ ಬಳಸಲಾಗುತ್ತಿದೆ. ವ್ಯಕ್ತಿಯು ಯಾವ ಧಾರ್ಮಿಕ ಸಂಸ್ಕಾರಗಳನ್ನು ಅನುಸರಿಸುತ್ತಾನೆ ಎನ್ನುವುದರ ಮೇಲೆ ವ್ಯಕ್ತಿಯ ಧರ್ಮವು ನಿರ್ಧಾರಿತವಾಗುತ್ತದೆ.

**ಕೋಷ್ಟಕ 03: ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವವರ ಧರ್ಮದ ವಿವರ**

| ಕ್ರ.ಸಂ | ಧರ್ಮ | ಆವೃತ್ತಿ | ಶೇಕಡವಾರು |
|---|---|---|---|
| 01 | ಹಿಂದೂ | 46 | 92% |
| 02 | ಮುಸ್ಲಿಂ | 00 | 00% |
| 03 | ಕ್ರೈಸ್ತ | 04 | 08% |
| | **ಒಟ್ಟು** | **50** | **100%** |

ಮೇಲಿನ ಕೋಷ್ಟಕದಲ್ಲಿ ಕಂಡುಬರುವುದೆನೆಂದರೆ ಟೀ ಎಸ್ಟೇಟ್ ಕಾರ್ಮಿಕರುಗಳಲ್ಲಿ (46) ಶೇ.92% ರಷ್ಟು ಹಿಂದೂಗಳು, (04) ಶೇ.08% ರಷ್ಟು ಕ್ರೈಸ್ತ ಧರ್ಮದವರು ಮತ್ತು ಮುಸ್ಲಿಂ ಧರ್ಮದವರು ಯಾರೂ ಇಲ್ಲದಿರುವುದನ್ನು ಗಮನಿಸಬಹುದಾಗಿದೆ.

**ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಜಾತಿ**

ಜಾತಿಯು ಹುಟ್ಟಿನಿಂದ ಬಂದದ್ದು, ಹಾಗಾಗಿ ಜಾತಿಯು ಬೇರೆಲ್ಲಾ ಸಮಾಜಗಳಿಗಿಂತ ನಮ್ಮ ಭಾರತೀಯ ಸಮಾಜದಲ್ಲಿ ಪ್ರಬಲವಾಗಿ ಬೇರೂರಿದೆ. ಜಾತಿವ್ಯವಸ್ಥೆಯು ಭಾರತೀಯರ ಜೀವನದ ಅವಿಭಾಜ್ಯ ಅಂಗವಾಗಿದೆ. ಜಾತಿಯು ಭಾರತೀಯರ ಜೀವನ, ರೂಢಿ, ಸಂಪ್ರದಾಯ, ವಿವಾಹ, ಕುಟುಂಬ, ಆಚಾರ, ವ್ಯವಹಾರ ಮೊದಲಾದವುಗಳೊಂದಿಗೆ ಹಾಸುಹೊಕ್ಕಾಗಿ ಸೇರಿಹೋಗಿವೆ.

**ಕೋಷ್ಟಕ 04: ಟೀ ಎಸ್ಟೇಟ್ ಕಾರ್ಮಿಕರ ಜಾತಿಯ ವಿವರ**

| ಕ್ರ.ಸಂ | ಜಾತಿ | ಆವೃತ್ತಿ | ಶೇಕಡವಾರು |
|---|---|---|---|
| 01 | ಪರಿಶಿಷ್ಟ ಜಾತಿ | 23 | 46% |
| 02 | ಪರಿಶಿಷ್ಟ ಪಂಗಡ | 12 | 24% |
| 03 | ಒಕ್ಕಲಿಗ | 07 | 14% |
| 04 | ನಾಯರ್ | 04 | 08% |
| 05 | ರೋಮನ್ ಕ್ಯಾಥೋಲಿಕ್ | 04 | 08% |
| | **ಒಟ್ಟು** | **50** | **100%** |

ಮೇಲಿನ ಕೋಷ್ಟಕದಲ್ಲಿ ಕಂಡುಬರುವುದೇನೆಂದರೆ ಟೀ ಎಸ್ಟೇಟ್ ಕಾರ್ಮಿಕರುಗಳಲ್ಲಿ ಪರಿಶಿಷ್ಟ ಜಾತಿ (23) ಶೇ.46% ರಷ್ಟು, ಪರಿಶಿಷ್ಟ ಪಂಗಡದವರು (12) ಶೇ.24% ರಷ್ಟು, ಒಕ್ಕಲಿಗ (07) ಶೇ.14% ರಷ್ಟು, ನಾಯರ್ (04) ಶೇ.08%, ರೋಮನ್ ಕ್ಯಾಥೋಲಿಕ್ (04) ಶೇ.08% ಜನರು ಇದ್ದಾರೆ ಎಂಬುದು ಕಂಡು ಬಂದಿದೆ.

**ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವವರ ಕಾರ್ಮಿಕರ ಶೈಕ್ಷಣಿಕ ಮಟ್ಟ**

ಶಿಕ್ಷಣವು ವ್ಯಕ್ತಿತ್ವದ ವಿಕಾಸಕ್ಕೆ ಮತ್ತು ಮಾನವನ ಸರ್ವತೋಮುಖ ಪ್ರಗತಿಗೆ ಅತ್ಯಾವಶ್ಯಕವಾದುದು. ಶಿಕ್ಷಣವು ವಿವೇಕ, ವಿನಯ, ಶಿಸ್ತು, ಕರ್ತವ್ಯಪಾಲನೆ, ದೂರದೃಷ್ಟಿ, ವಿಶಾಲ ಮನೋಭಾವನೆ ಮುಂತಾದ ಸದ್ಗುಣಗಳನ್ನು ಬೆಳೆಸಿ ಜೀವನವನ್ನು ವಿಕಾಸಗೊಳಿಸುತ್ತದೆ. ಪುರಾತನ ಕಾಲದಿಂದಲೂ ವಿದ್ಯೆಯನ್ನು ಕೆಲವರ ಸ್ವತ್ತಾಗಿಸಿಕೊಂಡು ಮಡಿವಂತಿಕೆಯಿಂದ ಶ್ರೀಸಾಮಾನ್ಯನಿಗೆ ಅದನ್ನು ಒದಗಿಸುತ್ತದೆ.

**ಕೋಷ್ಟಕ 05 : ಟೀ ಎಸ್ಟೇಟ್ ಕಾರ್ಮಿಕರ ಶೈಕ್ಷಣಿಕ ಮಟ್ಟ ವಿವರ**

| ಕ್ರ.ಸಂ | ಸಾಕ್ಷರತೆ | ಆವೃತ್ತಿ | ಶೇಕಡವಾರು |
|---|---|---|---|
| 1 | ಅನಕ್ಷರಸ್ಥರು | 00 | 00% |
| 2 | ಪ್ರಾಥಮಿಕ ಶಿಕ್ಷಣ | 33 | 66% |
| 3 | ಪ್ರೌಢ ಶಿಕ್ಷಣ | 17 | 34% |
| 4 | ಪದವಿ ಪೂರ್ವ/ಪದವಿ | 00 | 00% |
| | **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಸೂಚಿಸಿರುವಂತೆ ಅನಕ್ಷರಸ್ಥರು ಯಾರು ಇಲ್ಲದಿರುವುದು ಕಂಡುಬಂದಿದ್ದು, ಪ್ರಾಥಮಿಕ ಶಿಕ್ಷಣವನ್ನು ಪಡೆದವರು (33) ಶೇ.66% ರಷ್ಟು ಜನರು, ಪ್ರೌಢಶಿಕ್ಷಣ ಪಡೆದವರು (17) ಶೇ.34% ರಷ್ಟು, ಪದವಿಪೂರ್ವ ಮತ್ತು ಪದವಿ ಪಡೆದವರು ಯಾರೂ ಕೂಡ ಕಂಡು ಬಂದಿರುವುದಿಲ್ಲ. ಬಡತನದಿಂದ ಮತ್ತು ನಿರಾಸಕ್ತಿಯ ಕಾರಣದಿಂದಾಗಿ ಶಿಕ್ಷಣದಿಂದ ಹೊರಗುಳಿದಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ.

**ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಮಾತೃಭಾಷೆ**

ಭಾಷೆ ಎಂಬುದು ಸಂವಹನದ ಸಾಂಕೇತಿಕ ಪ್ರಕ್ರಿಯೆಯಾಗಿದೆ. ಭಾಷೆಯೂ ಸಂಸ್ಕೃತಿಯ ವಾಹಕವಾಗಿದ್ದು, ಇದು ಮಾತಿನ ರೂಪದಲ್ಲಿ ಇಲ್ಲವೆ ಬರವಣಿಗೆಯ ಸ್ವರೂಪದಲ್ಲಿರಬಹುದು. ಮಾನವರನ್ನು ಸಮಾಜದಲ್ಲಿ ಸುಸಂಸ್ಕೃತ ಪ್ರಜೆಯನ್ನಾಗಿ ರೂಪಿಸುವಲ್ಲಿ ಭಾಷೆಯು ಪ್ರಮುಖ ವಾಹಕವಾಗಿದೆ. ಪ್ರತಿಯೊಬ್ಬರು ತಮ್ಮದೆಯಾದ ಮಾತೃಭಾಷೆಯನ್ನು ಹೊಂದಿದ್ದು, ಭಾರತದಲ್ಲಿ ಅನೇಕ ವೈವಿಧ್ಯಮಯವಾದ ಭಾಷೆಗಳನ್ನು ಹೊಂದಿದೆ.

**ಕೋಷ್ಟಕ 06: ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರ ಮಾತೃಭಾಷೆ ವಿವರ**

| ಕ್ರ.ಸಂ | ಮಾತೃಭಾಷೆ | ಆವೃತ್ತಿ | ಶೇಕಡವಾರು |
|---|---|---|---|
| 1 | ಕನ್ನಡ | 03 | 06% |
| 2 | ತಮಿಳು | 47 | 94% |
| | **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಸೂಚಿಸಿರುವಂತೆ (03) ಶೇ.06% ರಷ್ಟು ಜನರು ಕನ್ನಡ ಭಾಷೆ ಮಾತನಾಡುವವರಾಗಿದ್ದು, (47) ಶೇ.94% ರಷ್ಟು ಜನರು ತಮಿಳು ಭಾಷೆ ಮಾತನಾಡುವವರಾಗಿದ್ದಾರೆ.

**ಕೋಷ್ಟಕ 07: ಟೀ ಎಸ್ಟೇಟ್‌ನಲ್ಲಿ ದುಡಿಯುತ್ತಿರುವ ಕಾರ್ಮಿಕರು ವಲಸೆ ಬಂದವರ ಸಂಖ್ಯೆಗಳ ವಿವರ**

| ಕ್ರ.ಸಂ | ಕುಟುಂಬ ಸದಸ್ಯರ ಸಂಖ್ಯೆ | ಆವೃತ್ತಿ | ಶೇಕಡವಾರು |
|---|---|---|---|
| 1 | ವಲಸೆ ಬಂದವರು | 47 | 94% |
| 2 | ಸ್ಥಳೀಯರು | 03 | 06% |
| | **ಒಟ್ಟು** | **50** | **100%** |

ಈ ಕೋಷ್ಟಕದಲ್ಲಿ ವಲಸೆ ಬಂದವರ ಸಂಖ್ಯೆಗಳನ್ನು ಗಮನಿಸಿದಾಗ (47) ಶೇ 94% ಜನ ವಲಸೆ ಬಂದಿದ್ದು, (03) ಶೇ.6% ಜನ ಸ್ಥಳಿಯರು ಕಂಡುಬಂದಿದ್ದಾರೆ. ಇಲ್ಲಿ ದುಡಿಯುತ್ತಿರುವ ಕಾರ್ಮಿಕರುಗಳು ಬೇರೆಬೇರೆ ಜಿಲ್ಲೆ ಹಾಗೂ ರಾಜ್ಯಗಳಿಂದ ಬಂದಿರುವವರಾಗಿದ್ದಾರೆ. ಹೆಚ್ಚಿನ ಜನರು ತಮಿಳುನಾಡಿನವರಾಗಿದ್ದಾರೆ. ಜೀವನಾವಶ್ಯಕತೆಗಾಗಿ ವಲಸೆ ಬಂದಿರುವವರಾಗಿದ್ದಾರೆ ಮತ್ತು ಸ್ಥಳಿಯರಿಗೆ ಇಲ್ಲಿ ದುಡಿಮೆ ಮಾಡುವುದಕ್ಕೆ ಆಸಕ್ತಿ ಕಡಿಮೆ ಇರುವ ರೀತಿಯಲ್ಲಿ ಇದೆ.

**ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಕಂಡು ಬಂದ ಅಂಶಗಳು**

ಟೀ ಎಸ್ಟೇಟ್ ಕಾರ್ಮಿಕರ ಕುರಿತಂತೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಬಗೆಗಿನ ಅಧ್ಯಯನವನ್ನು ನಡೆಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ಸಂದರ್ಶಿತರ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಬಗ್ಗೆ ಸೂಚನದಾರರನ್ನು ಸಂದರ್ಶಿಸಿ ಅವಲೋಕಿಸಿದಾಗ ಕಂಡುಬಂದ ಅಂಶಗಳು

- ಟೀ ಎಸ್ಟೇಟ್‌ಲ್ಲಿ ದುಡಿಯುತ್ತಿರುವ ಕಾರ್ಮಿಕರು ಬೇರೆ–ಬೇರೆ ಜಿಲ್ಲೆ ಮತ್ತು ರಾಜ್ಯಗಳಿಂದ ವಲಸೆ ಬಂದಿದ್ದಾರೆ. ಮೈಸೂರು ಜಿಲ್ಲೆಯಿಂದ, ತಮಿಳುನಾಡಿನ ರಾಜ್ಯದಿಂದ ಬಂದಿರುವರು ಇರುವುದು ಅಧ್ಯನದಿಂದ ತಿಳಿದುಬಂದಿದೆ.
- ಹಿಂದುಳಿದ ಸಮುದಾಯದವರುಗಳು ಹೆಚ್ಚಾಗಿದ್ದಾರೆ.
- ಟೀ ಎಸ್ಟೇಟ್ ಕಾರ್ಮಿಕರಲ್ಲಿ ಹೆಚ್ಚಾಗಿ ವಲಸೆ ಬಂದಿರುವವರು ಇರುವದರಿಂದ ಅವರು ಸ್ವಂತ ಭೂಮಿಯನ್ನು ಹೊಂದಿಲ್ಲ.
- ಟೀ ಎಸ್ಟೇಟ್ ಕಾರ್ಮಿಕರ ಶೈಕ್ಷಣಿಕ ಮಟ್ಟ ಕಡಿಮೆ ಇರುವುದರಿಂದ ಅವರಿಗೆ ತಮ್ಮ ಕಾಯ್ದೆಗಳ ಬಗ್ಗೆ ಅರಿವಿಲ್ಲ ಹಾಗೇ ಇದರ ಬಗ್ಗೆ ಯಾವುದೇ ರೀತಿಯ ಮಾಹಿತಿಯು ಅವರಿಗಿಲ್ಲ.
- ಉದ್ಯೋಗಕ್ಕಾಗಿಯೇ ವಲಸೆ ಬಂದಿರುವುದರಿಂದ ಮತ್ತು ಇಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ಕೆಲಸವಿರುವುದರಿಂದ ಕೇವಲ ಟೀ ಎಸ್ಟೇಟಿನ ಕೆಲಸಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ.

**ಸಲಹೆಗಳು**

ಟೀ ಎಸ್ಟೇಟ್ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಒಂದು ಸಮಾಜಶಾಸ್ತ್ರೀಯ ಅಧ್ಯಯನ ವಿಶೇಷವಾಗಿ ಸಕಲೇಶಪುರ ತಾಲೂಕಿನ ಕಾಡುಮನೆ ಟೀ ಎಸ್ಟೇಟ್‌ಗೆ ಸಂಬಂಧಿಸಿದಂತೆ ಈ ವಿಷಯದ ಬಗ್ಗೆ ಅಧ್ಯಯನ ಮಾಡಿ ಸಂದರ್ಶಿತರ ಸಮಸ್ಯೆಗಳನ್ನು ತಿಳಿದು ಮಾಹಿತಿಯನ್ನು ಸಂಗ್ರಹಿಸಿ ಅದಕ್ಕೆ ಸೂಕ್ತವಾದ ಪರಿಹಾರವನ್ನು ನೀಡುವ ಪ್ರಯತ್ನವನ್ನು ಮಾಡಲಾಗಿದೆ. ಯಾವುದೇ ಸಮಸ್ಯೆಯಾದರೂ ಅದಕ್ಕೆ ಪರಿಹಾರವು ಇದ್ದೇ ಇರುತ್ತದೆ. ಕೆಲವೊಂದು ಸಮಸ್ಯೆ ಅಲ್ಪಾವದಿಯಲ್ಲಿ ಪರಿಹಾರ ದೊರೆತರೆ, ಮತ್ತೆ ಕೆಲವೊಂದು ಸಮಸ್ಯೆಗೆ ದೀರ್ಘಾವಧಿಯಲ್ಲಿ ದೊರೆಯುತ್ತದೆ.

- ಕಾರ್ಮಿಕರಿಗೆ ತಮ್ಮ ಕಾಯ್ದೆಗಳ ಬಗ್ಗೆ ತಿಳುವಳಿಕೆ ಮೂಡಿಸಬೇಕು.
- ಕಾರ್ಮಿಕರ ಮಕ್ಕಳುಗಳಿಗೆ ಶಿಕ್ಷಣವನ್ನು ಕೊಡಿಸಬೇಕು.

- ಕಾರ್ಮಿಕರು ದುಶ್ಚಟಗಳನ್ನು ದೂರವಿರುವಂತೆ ತಿಳಿಸಬೇಕು.
- ಕಾರ್ಮಿಕರು ಕೇವಲ ಕೂಲಿಗೆ ಮಾತ್ರ ಸೀಮಿತವಾಗಿರದೆ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು.

**ಉಪಸಂಹಾರ**

ಕಾಡುಮನೆ ಟೀ ಎಸ್ಟೇಟ್‌ಲ್ಲಿ ದುಡಿಯುತ್ತಿರುವ ಕಾರ್ಮಿಕರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಸಮಾಜದಲ್ಲಿರುವ ಕಾರ್ಮಿಕರೆಲ್ಲರೂ ಒಂದಲ್ಲ ಒಂದು ಸಮಸ್ಯೆಯನ್ನು ಎದುರಿಸುತ್ತಿದ್ದು, ಸಮಾಜದಲ್ಲಿ ತಳಮಟ್ಟದ ಸ್ಥಾನವನ್ನು ಹೊಂದಿದ್ದಾರೆ. ಹಾಗಾಗಿ ಇವರ ಜೀವನ ಸುಶಿಕ್ಷಿತವಾಗಿ ನಡೆಯ ಬೇಕಾದರೆ ಮೊದಲು ಅವರಲ್ಲಿ ಜಾಗೃತಿ ಮೂಡಿಸಬೇಕು ಅಷ್ಟೇ ಅಲ್ಲದೆ ಸಂಬಂಧಪಟ್ಟ ಅಧಿಕಾರಿಗಳು ಅವರ ಕಲ್ಯಾಣದ ಕಡೆಗೆ ಗಮನ ಹರಿಸಿದರೆ ಅವರನ್ನು ಮುಖ್ಯ ವಾಹಿನಿಗೆ ತರಬಹುದು. ಮೈ ಮುರಿದು ದುಡಿದರೂ ಕೆಲವು ಕುಟುಂಬಗಳು ಬಡತನದ ದಾಸ್ಯದಿಂದ ಹೊರ ಬರದೆ ಒದ್ದಾಡುತ್ತಿವೆ. ಸರಕಾರದ ಸೌಲಭ್ಯಗಳು ಸಾಕಷ್ಟಿದ್ದರೂ ಅವುಗಳ ನೆರವಿಲ್ಲದೆ ಬದುಕಿನ ಬಂಡಿ ಸಾಗಿಸುತ್ತಿದ್ದಾರೆ. ಈ ಎಲ್ಲಾ ಸಂಕೋಲೆಗಳಿಂದ ಹೊರ ಬಂದು ಉತ್ತಮ ಜೀವನ ನಡೆಸಲಿ ಎಂಬುದೇ ಈ ಅಧ್ಯಯನದ ಆಶಯ.

**ಪರಾಮರ್ಶನ ಗ್ರಂಥಗಳು**


- ಅಶೋಕ್ ಕುಮಾರ್. ಯು.ಬಿ.(2001). ಕೃಷಿ ಕೂಲಿಕಾರರ ಬದುಕು ಬವಣೆ. ಚೇತನ ಬುಕ್ ಹೌಸ್.
- ಆಂಜನಪ್ಪ, ಬಿ.ಹೆಚ್. (2009). ಮಹಿಳೆ ಮತ್ತು ದುಡಿಮೆ. ದೇಸಿ ಪುಸ್ತಕ.
- ಚಂದ್ರಶೇಖರ, ಟಿ.ಆರ್. (2010). ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಇಂದಿರಾ, ಎಸ್. (2010). ಮಹಿಳೆ ಮತ್ತು ಸವಾಲುಗಳು. ಶ್ರುತಿ ಲೋಕ ಪ್ರಕಾಶನ.
- ನಟರಾಜ್, ಎಂ.ಆರ್. (2002). ಕಾರ್ಮಿಕ ಸಂಘಗಳ ಕಾಯಿದೆ ಮತ್ತು ನಿಯಮಗಳು. ವೀನವೀ ಪ್ರಕಾಶನ.
- ರಾವ್, ಎಂ.ವಿ.ಆರ್. (1992). ಕಾರ್ಮಿಕರ ಕಾನೂನು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಯ.
- ರಾವ್, ಎಂ.ವಿ.ಆರ್. (1992). ಕಾರ್ಮಿಕರ ಕಾನೂನು–ಭಾಗ 2 ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಯ.
- ಶ್ರೀನಿವಾಸಯ್ಯ. (1983). ಹೂ ಕಾರ್ಮಿಕ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- Ahuja, R. (2009). *Social problems in India* (6th ed.). Rawat Publications.
- Goetz, A. M. (2001). *Women development workers*. Sage Publications.
- Patnaik, S. K. (2007). *Status of women in India*. Sonali Publications.
- Ramegowda, A. (1997). *Gender inequality, power and privileges*. [Publisher not specified].
- Singh, K. V. (2007). *Women issues, empowerment and gender discrimination*. Vista International Publishing House.
- Wikipedia. (n.d.). *Retrieved October 17, 2025, from* [https://en.wikipedia.org/](https://en.wikipedia.org/)